**ದಿನಾಂಕ: 01-09-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 1 ರಿಂದ 10ನೇ ಪ್ರತಿವಾದಿ ಪರ ಶ್ರೀ ಪಿ.ಪಿ.ಕೆ. ವಕೀಲರಿಂದ**

5. ನಾಗೇಂದ್ರಪ್ಪ ಕಾಕನಾಗಬೇಕು. ನಾಗೇಂದ್ರಪ್ಪ ಮತ್ತು ನಮ್ಮ ನಡುವೆ ಭಾಗ ಆಗಿರುತ್ತದೆ ಆದರೆ ಸರಿಯಾದ ಭಾಗ ಆಗಿರುವುದಿಲ್ಲ. ನಿಮ್ಮ ದಾವೆಯಲ್ಲಿ ಸರಿಯಾಗಿ ಭಾಗ ಆಗಿಲ್ಲ ಭಾಗ ಆಗಬೇಕೆಂದು ಈ ಕೇಸನ್ನು ಮಾಡಿದ್ದೇನೆ ಎಂದು ಎಲ್ಲಿಯೂ ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ದಾವೆಯಲ್ಲಿ ಕಲ್ಬುರ್ಗಿ ನ್ಯಾಯಾಲಯದಲ್ಲಿ ಕೇಸು ಹಾಕಿರುವ ಬಗ್ಗೆ ಈ ದಾವೆಯಲ್ಲಿ ಬರೆದಿಲ್ಲ ಎಂದರೆ ಸರಿ. ಈಗ ನನಗೆ 50 ವರ್ಷ ವಯಸ್ಸು ಆಗಿರುತ್ತದೆ. 1984-85ನೇ ಸಾಲಿನಿಂದ ಈ ಕೇಸು ಹಾಕುವವರೆಗೆ ಭಾಗ ಬೇಕು ಎಂದು ಕೇಳಿಲ್ಲ ಎಂದರೆ ಸರಿ.

6. 1ನೇ ಪ್ರತಿವಾದಿಯ ಮಗ ನನಗೆ ಗೊತ್ತು. ಪವನಕುಮಾರ ಇನ್ನೊಬ್ಬ ಮಗ ರತ್ನಾಕರ ಅವರ ಹೆಂಡತಿ ಜಗದೇವಿ ಎಲ್ಲರೂ ಸೇರಿ ಅಶೋಕನ ಮೇಲೆ ಕೇಸು ಹಾಕಿದ್ದರು ಎಂದರೆ ಸರಿ. ಸದರಿ ಕೇಸು 2011 ರಲ್ಲಿ ಹಾಕಿರುತ್ತಾರೆ ಎಂದರೆ ಸರಿ. ಆ ಕೇಸಿನಲ್ಲಿ ರಾಜೀ ಸಂಧಾನ ಮಾಡಿಕೊಂಡು ಸ.ನಂ.45/3 ರಲ್ಲಿ 9 ಎಕರೆ 1ನೇ ಪ್ರತಿವಾದಿಯು ತನ್ನ ಹೆಂಡತಿ ಮಕ್ಕಳಿಗೆ ಬಿಟ್ಟುಕೊಟ್ಟಿದ್ದಾನೆ ಎಂದರೆ ಸರಿ. ಕಲ್ಬುರ್ಗಿ ನ್ಯಾಯಾಲಯದಲ್ಲಿ ಹಾಕಿದಂತಹ ಕೇಸಿನಲ್ಲಿ ಭಾಗ ಆಗಿದೆ ಎಂದು ಬರೆದು ಹಾಕಿದ್ದೀರಿ ಎಂದರೆ ಸರಿ. ಈ ದಾವೆಯು ಕಾಲಮಿತಿಯಲ್ಲಿ ಇಲ್ಲ ಎಂದರೆ ಗೊತ್ತಾಗಲ್ಲ ಎಂದು ಉತ್ತರಿಸುತ್ತಾರೆ. ನಾಗೇಂದ್ರಪ್ಪನಿಗೆ ಈ ಕೇಸಿನಲ್ಲಿ ಪಾರ್ಟಿಯನ್ನಾಗಿ ಮಾಡಿಲ್ಲ. ಈ ದಾವೆಯಲ್ಲಿ ನಾಗೇಂದ್ರಪ್ಪನಿಗೆ ಭಾಗ ಕೊಟ್ಟಿಲ್ಲ ಎಂದು ಈ ದಾವೆಯಲ್ಲಿ ಬರೆದಿದ್ದೀರಾ ಎಂದರೆ ಗೊತ್ತಿಲ್ಲ. ಕಲ್ಬುರ್ಗಿಯ ಇದ್ದಂತಹ ದಾವೆಯಲ್ಲಿ ನೀವು ಮತ್ತು ನಾಗೇಂದ್ರಪ್ಪ ಕೂಡಿ ಭಾಗ ಆಗಿದೆ ಎಂದು ಬರೆದು ಹಾಕಿದ್ದೀರಿ ಎಂದರೆ ಸರಿ ಎಂದು ಉತ್ತರಿಸಿ ಸಾಕ್ಷಿ ಮುಂದುವರೆದು ಅರ್ಧಂಬರ್ಧ ಆಗಿದೆ ಎಂದು

ಉತ್ತರಿಸುತ್ತಾರೆ. ಆ ಕೇಸಿನಲ್ಲಿ ಅರ್ಧಂಬರ್ಧ ಭಾಗ ಆಗಿದೆ ಎಂದು ಬರೆದು ಹಾಕಿಲ್ಲ ಎಂದರೆ ಸರಿ. ರತ್ನಪ್ಪನ ಮಕ್ಕಳೆಲ್ಲಾ ದಾವಾ ಆಸ್ತಿಯನ್ನು ಹಂಚಿಕೊಂಡಿದ್ದಾರೆ ಎಂದರೆ ಸರಿ. ಯಾವ ರೀತಿ ಹಂಚಿಕೊಂಡಿದ್ದಾರ ಆ ರೀತಿ ಜಮೀನುಗಳಲ್ಲಿ ಬಿತ್ತುವುದು ಬೆಳೆಯುವುದು ಮಾಡುತ್ತಿದ್ದಾರೆ ಎಂದರೆ ಸರಿ. ಯಾರು ಯಾರಿಗೆ ಸಾಲ ಬೇಕಾಗಿದೆ ಅವರವರು ಸದರಿ ಜಮೀನುಗಳ ಮೇಲೆ ಸಾಲವನ್ನು ಪಡೆದಿದ್ದಾರೆ ಎಂದರೆ ಸರಿ. ನಿಮ್ಮ ವಕೀಲರು ಏನು ಬರೆದು ಹಾಕಿದ್ದಾರೆ ಎಂದು ನಿಮಗೆ ಓದಿ ಹೇಳಿಲ್ಲ ಎಂದರೆ ಸರಿ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದು ಹಾಕಿದ್ದಾರೆ ಎಂದು ಓದಿ ಹೇಳಿಲ್ಲ ಆದರೆ ಸಹಿ ಮಾತ್ರ ಪಡೆದಿದ್ದಾರೆ ಎಂದರೆ ಸರಿ.

7. 1974ರ ನಂತರ ಭಾಗ ಆಗಿ ಅವರವರು ಸ್ವಾಧೀನದಲ್ಲಿದ್ದು ಸ್ವತಂತ್ರ ಅನುಭವದಲ್ಲಿದ್ದು ಮಾರಾಟ ಮಾಡಿದ್ದಾರೆ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ಈ ದಾವೆಯನ್ನು ಹಾಕಲು ನಿಮಗೆ ಯಾವುದೇ ಕಾರಣ ಇಲ್ಲದಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿಯ ಹೆಸರಿನಲ್ಲಿರುವ 5 ಎಕರೆ ಜಮೀನನ್ನು ನಿಮ್ಮ ಹೆಸರಿಗೆ ಸುಳ್ಳಾಗಿ ಮಾಡಿಕೊಂಡಿದ್ದೀರಿ ಎಂದರೆ ಪಾಲು ಬರೋಬ್ಬರಿ ಬಂದಿಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಅನುಕೂಲವಾಗುವ ರೀತಿಯಲ್ಲಿ ಬರೆಯಿಸಿಕೊಂಡು ಈ ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ಮುಟೇಷನ್ ಮಾಡಿಕೊಂಡಿದ್ದಕ್ಕೆ ಪ್ರತಿವಾದಿಯರು ಪ್ರತಿ ಪರಿಹಾರ ಕೇಳಿದ್ದಾರೆ ಎಂದರೆ ನಮ್ಮ ವಕೀಲರು ಹೇಳಿಲ್ಲ ಎಂದು ಉತ್ತರಿಸುತ್ತಾರೆ. ಮೊದಲೇ ಎಲ್ಲಾ ಪಾಲು ಆಗಿದ್ದು ಅದನ್ನು ಮಾರಾಟ ಮಾಡಿದ್ದರೂ ಸಹ ಈಗ ಸರಿಯಾಗಿ ಪಾಲು ಆಗಿಲ್ಲ ಎಂದು ಸುಳ್ಳು ದಾವೆ ಮಾಡಿದ್ದೀರಿ ಎಂದರೆ ಸರಿಯಲ್ಲ.

**12ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರು ಇರುವ ಕಾರಣ ಸಾಕ್ಷಿ ಯ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ